ವರ್ಷಗಳಾದುವೆಂದೂ, ಆಗಲೇ ಎರಡು ಮಕ್ಕಳಿದ್ದಾವೆಂದೂ, ಅವಳ ಗಂಡ ಮುಂಬೈನಲ್ಲೇ ಇದ್ದಾನೆಂದೂ ಬರೆದಿದ್ದ. ಯಾವ ಯಾತನೆಯೂ ಆಗದೇ ಹೋಯಿತಲ್ಲ? ಕ್ಯಾಲೆಂಡರಿನ ಹಾಳೆಗಳಂತೆ ದಿನಗಳನ್ನೂ ಉರುಳಿಸುತ್ತಿದ್ದೇನೆ. ಕ್ಲೀಷೆಗಳಿಲ್ಲ. ಸಂಕಟಗಳಿಲ್ಲ, ಆಹ್ವಾನಗಳಿಲ್ಲ...

ತನಗೆ ಯಕ್ಷಗಾನದ ಹುಚ್ಚು ಹಿಡಿಸಿದವನೇ ದೊಡ್ಡಪ್ಪ. ಆಸುಪಾಸಿನಲ್ಲಿ ಎಲ್ಲಿಯೇ ಯಕ್ಷಗಾನವಿರಲಿ ಇಬ್ಬರೂ ಹೋಗುತ್ತಿದ್ದರು. ಹೀಗೇ ಒಂದು ರಾತ್ರಿ ತಾವಿಬ್ಬರೂ ದೀವಿಗೆ ದಾಟಿ ಒಂದು ಮೈಲು ಆಚೆಯಿರುವ ಊರೊಂದರಲ್ಲಿ ಆಟಕ್ಕೆ ಹೋಗಿದ್ದೆವು. ಯಾವುದೋ ಹಬ್ಬದ ದಿನ ಅದು. ಪಾನಕ ಕೋಸಂಬರಿ ತಿಂದ ನೆನಪು. ಹಾಂ ರಾಮನವಮಿ. ಯಕ್ಷಗಾನ ಅರ್ಧ ಮುಗಿಯುವಾಗಲೇ ನಿದ್ದೆ ಒತ್ತೊತ್ತಿ ಬಂದು ಇಬ್ಬರೂ ಮರಳಿದೆವು. ಕತ್ತಲಲ್ಲಿ ನಡೆದು ಮನೆ ಸೇರುವವರೆಗೂ ಕನಸಲ್ಲೇ ನಡೆದ ಹಾಗೆ, ಮನೆಗೆ ಬಂದರೆ ಬಾಗಿಲು ಓರೆಯಾಗಿತ್ತು. ದೊಡ್ಡಪ್ಪ 'ಯಮುನಾ ಯಮುನಾ' ಎಂದು ಮೆಲ್ಲಗೆ ಕರೆದು ಕದ ದೂಡಿದರು. ತೆರೆದುಕೊಂಡಿತು. ಒಳಗೆ ಲಾಟೀನ ಬೆಳಕಿನಲ್ಲಿ ಖಾಲಿ ನಿಂತ ಮನೆ.

ಮನೆಯಿಡೀ ಹುಡುಕಿದರೂ ಯಮುನಕ್ಕ ಪತ್ತೆಯಿಲ್ಲ. ತನಗೆ ಭಯವಾಗಿ ಹಾಸಿಗೆಗೆ ಚಾಚಿಕೊಂಡೆ. ದೊಡ್ಡಪ್ಪ ಅತ್ತಿಂದಿತ್ತ ಶತಪಥ ನಡೆದಾಡುತ್ತಿದ್ದರು. ಏನೋ ಗೊಣಗುತ್ತಿದ್ದರು. ದೂರದ ದೇವಸ್ಥಾನದಲ್ಲಿ ರಾತ್ರಿಯಿಡೀ ನಡೆಯುತ್ತಿದ್ದ ಭಜನೆಯ ಕ್ಷೀಣ ಸದ್ದು. ಸ್ವಲ್ಪ ಹೊತ್ತಿನ ನಂತರ ಮೆಲ್ಲನೆ ಬಾಗಿಲು ಸರಿಸಿ, ಯಮುನಕ್ಕ ಒಳಬಂದಳು. ದೇವರೇ, ಈಗ ಅದನ್ನೆಲ್ಲ ನೆನೆಯಲಾಗುತ್ತಿಲ್ಲ – ಏನೂ ಆಗದವರ ಹಾಗೆ ಆಕೆ ಗತ್ತಿನಿಂದ ನಡೆದು ಬಂದಳು. ಮುಡಿ ಬಿಚ್ಚಿಕೊಂಡಿತ್ತು. ಬೆವರಿನಿಂದ ತೊಯ್ದ ಹಣೆಯಿಂದ ಇಳಿದುಬಂದ ಕುಂಕುಮ. ಹಣೆಗೆ ಅಂಟಿಕೊಂಡ ಮುಂಗುರುಳು. ಬಲಭಾಗದ ರವಿಕೆ ತೋಳು, ಕಂಕಳು ಪೂರ್ತಿ ಬೆವರಿನಿಂದ ತೊಪ್ಪೆ, ಮೋರೆಯ ಮೇಲೆ ಸುಖವಾದ ಮುಗುಳ್ನಗೆ, ನಿಜವಾಗಿಯೂ ಮುಗುಳ್ನಗೆಯಿತ್ತೇ? ಇದು ನನ್ನ ಮನಸ್ಸು ಇದೀಗ ಸೇರಿಸಿದ ವಿವರವಲ್ಲವೇ? 'ಎಲ್ಲಿ ಹೋಗಿದ್ದೆ ಭೋಸುಡಿ...' ಎಂದು ದೊಡ್ಡಪ್ಪ ದನಿ ಎತ್ತರಿಸಿದರು. 'ಅಲ್ಲೇ ಮಲಗಬೇಕಿತ್ತು... ಇಲ್ಲಿ ಯಾಕೆ ಮತ್ತೆ ಬಂದೆ...' ಬೈಯಲು ಆರಂಭಿಸಿದರು. ಯಮುನಕ್ಕ 'ಹುಡುಗ ಮನೆಯಲ್ಲಿದ್ದಾನೆ. ಮೆಲ್ಲಗೆ ಮಾತಾಡಿ...' ಅಂದಳು. ಇವಳೇಕೋ ತನ್ನನ್ನು ಅನಾವಶ್ಯಕ ಒಳಗೆ ಸೆಳೆಯುತ್ತಿದ್ದಾಳೆ ಅನ್ನಿಸಿ ಹೊದಿಕೆಯಾಚೆ ಕತ್ತು ಚಾಚಿ ನೋಡುತ್ತಿದ್ದವ ಮುಸುಕೆಳೆದುಕೊಂಡೆ. ಒಳಗೆ ಕತ್ತಲೆ. ಬಿಸಿಯುಸಿರು. ಮತ್ತೆ ಚಾದರ ಸರಿಸಿ ನೋಡಿದಾಗ ಸಿಟ್ಟಿನಿಂದ ಮೋರೆ, ಕಿವಿ, ಕೆಂಪಾಗಿ ಕೈಕಾಲು ಅದರುತ್ತಿದ್ದ ದೊಡ್ಡಪ್ಪ ರಂಡೆ ರಂಡೆ ಅನ್ನುತ್ತಲೇ ಮುಂದೆ ಹೆಜ್ಜೆಯಿಟ್ಟು ಕೈಯೆತ್ತಿ ಇನ್ನೇನು ಅವಳ ಕಪಾಳಕ್ಕೆ ಬಾರಿಸಬೇಕು ಅನ್ನುವಾಗ ಯಮುನಕ್ಕ ತನ್ನ ಬಲಿಷ್ಠ ಕೈ ಚಾಚಿ ಅವನನ್ನು ಗುದುಕಿ ನಿಲ್ಲಿಸಿದಳು. 'ನೀರಿಲ್ಲದವರು... ನಿಮಗೆ ತಾಕತ್ತಿಲ್ಲ... ನನಗೇನು ಹೇಳುತ್ತೀರಿ...' ಅಂದಳು. ಅವಳೆದುರು ಸಣ್ಣ ಹುಡುಗನ ಹಾಗೆ ಕಾಣುತ್ತಿದ್ದ ಬಡಕಲು ಮೈಯ ದೊಡ್ಡಪ್ಪನನ್ನು ಕಂಡಾಗ ಪಾಪ ಅನ್ನಿಸಿತು. ಬೈಯುತ್ತಿದ್ದ ಅವನ ದನಿ ಗದ್ಗದವಾದಂತೆನಿಸಿತು. ಅವಳು ಕೈಹಿಡಿದು ನಿಲ್ಲಿಸಿದ ಅವಮಾನಕ್ಕೋ ಸಿಟ್ಟಿಗೋ, ಕಣ್ಣಲ್ಲಿ ನೀರು ಕಲೆತು ಧಪ ಧಪ ಕಾಲು ಹಾಕುತ್ತ ಆ ಕತ್ತಲಲ್ಲೇ ಹೊರಗೆ ಹೋದ. ಅಬ್ಬ! ಹೇಗೆ ಅವನ ಕೈಯನ್ನ ಬಲವಾಗಿ ಹಿಡಿದಿದ್ದಳು. ಬಿಡಿಸಿಕೊಳ್ಳಲಿಕ್ಕೆ ಆತ ಒದ್ದಾಡಬೇಕಾಯಿತು. ತಾನು ಹೇಳಬೇಕಾದ್ದೆಲ್ಲ ಹೇಳಿದ ಮೇಲೆ ಆಕೆ ಕೈಬಿಟ್ಟಳು. ಸ್ವಲ್ಪ ಹೊತ್ತು ಕೂರದೇ ನಿಲ್ಲದೇ ಚಡಪಡಿಸಿದ ಯಮುನಕ್ಕ ನಂತರ ಹಾಸಿಗೆಯಲ್ಲಿ ಉರುಳಿಕೊಂಡಳು. ಮರುದಿನ ಸಂಜೆ ದೊಡ್ಡಪ್ಪನ ಹೆಣ ದೀವಿಗೆಯಿಂದ ಮೈಲು ದೂರದಲ್ಲಿ ಅಘನಾಶಿನಿಯ ಬಂಡೆಗಳಿಗೆ ಆತುನಿಂತಿತ್ತು.